International Journal of Kannada Research
www.kannadajournal.com

ISSN: 2454–5813
IJKR 2023; 9(3): 71-73
© 2023 IJKR
www.kannadajournal.com
Received: 01-05-2023
Accepted: 07-06-2023

**ಡಾ. ದಸ್ತಗೀರಸಾಬ್**
ಸಹಾಯಕ ಪ್ರಾಧ್ಯಾಪಕ,
ಶ್ರೀಮತಿ ಸರಳಾದೇವಿ
ಸತೀಶ್ಚಂದ್ರ ಅಗರವಾಲ್
ಸರಕಾರಿ ಪ್ರಥಮ ದರ್ಜೆ
(ಸ್ವಾಯತ್ತ) ಕಾಲೇಜು, ಬಳ್ಳಾರಿ,
ಕರ್ನಾಟಕ, ಭಾರತ

**Corresponding Author:**
**ಡಾ. ದಸ್ತಗೀರಸಾಬ್**
ಸಹಾಯಕ ಪ್ರಾಧ್ಯಾಪಕ,
ಶ್ರೀಮತಿ ಸರಳಾದೇವಿ
ಸತೀಶ್ಚಂದ್ರ ಅಗರವಾಲ್
ಸರಕಾರಿ ಪ್ರಥಮ ದರ್ಜೆ
(ಸ್ವಾಯತ್ತ) ಕಾಲೇಜು, ಬಳ್ಳಾರಿ,
ಕರ್ನಾಟಕ, ಭಾರತ

# ಜಾಗತೀಕರಣದ ಸನ್ನಿವೇಶ: ರಂಗಭೂಮಿಯ ಬಿಕ್ಕಟ್ಟುಗಳು

**ಡಾ. ದಸ್ತಗೀರಸಾಬ್**

**DOI:** https://doi.org/10.22271/24545813.2023.v9.i3b.861

**ಪೀಠಿಕೆ**

ರಂಗಭೂಮಿಗೆ ನಮ್ಮಲ್ಲಿ ಒಂದು ದೊಡ್ಡ ಪರಂಪರೆಯೇ ಇದೆ. ಹಾಗೆ ನೋಡಿದರೆ ರಂಗಭೂಮಿಯ ಕಲ್ಪನೆ ಮೊದಲು ಹುಟ್ಟಿಕೊಂಡಿದ್ದೇ ಗ್ರೀಕ್ ನಲ್ಲಿ. " ಯಾವುದೇ ದೇಶದ ರಂಗಭೂಮಿ ಅಲ್ಲಿನ ಧಾರ್ಮಿಕ ಪರಂಪರೆಯ ಅಂಗವಾಗಿ ಹುಟ್ಟಿ, ಸಾಮಾಜಿಕವಾಗಿ ಬೆಳೆದಿದೆ ಎಂಬುದು ಸ್ಪಷ್ಟ ವಿಚಾರ. ನೃತ್ಯ ಸಂಗೀತ ಶಿಲ್ಪ ಮುಂತಾದ ಸಾಹಿತ್ಯೇತರ ಕಲೆಗಳು ನಾಟಕದ ಪ್ರಮುಖ ಅಂಗಗಳು." * 1 ಇದು ನಮ್ಮ ಸಂಸ್ಕೃತಿಯನ್ನು ಕಾಪಿಟ್ಟುಕೊಂಡು ಬಂದ ಒಂದು ಜೀವಂತ ಮಾಧ್ಯಮ. ಸಮಾಜಕ್ಕೆ ಪೂರಕವಾದ ವಿಚಾರಗಳನ್ನು ಜನ ಸಮುದಾಯಕ್ಕೆ ಪರಿಣಾಮಕಾರಿಯಾಗಿ ದಾಟಿಸಲು ಇರುವ ಸಮರ್ಥ ಮಾಧ್ಯಮವೆಂದರೆ ರಂಗಭೂಮಿ. ಬದುಕಿನ ಎಲ್ಲ ಚಹರೆಗಳನ್ನು ವಿಶಿಷ್ಟವಾಗಿ ಕಟ್ಟಿಕೊಡುವ ನಾಟಕ ಮನೋರಂಜನೆಯ ಜೊತೆಗೆ ಅಕ್ಷರಸ್ಥರಿಗೂ ಅನಕ್ಷರಸ್ಥರಿಗೂ ಏಕಕಾಲದಲ್ಲಿ ಶಿಕ್ಷಣವನ್ನು ಕೊಡುವ ಕಲಾಶಾಲೆ. ಹಿರಿಯ ರಂಗಕರ್ಮಿಗಳಾದ ಬಿ.ವಿ ಕಾರಂತರು ಹೇಳುವಂತೆ "ಸಿನಿಮಾದಲ್ಲಿ ಇದ್ದ ಮನುಷ್ಯ ದೊಡ್ಡದಾಗಿ ಕಾಣುತ್ತಾರೆ. ಟಿವಿಯಲ್ಲಿ ತನಗಿಂತ ಸಣ್ಣವನಾಗಿ ಕಾಣುತ್ತಾನೆ. ಆದರೆ ರಂಗಭೂಮಿಯಲ್ಲಿ ಮನುಷ್ಯ, ಮನುಷ್ಯನ ಆಕಾರದಲ್ಲೇ ಕಾಣುತ್ತಾನೆ." *2 ಎನ್ನುವ ಮಾತುಗಳನ್ನು ಗಮನಿಸಿದರೆ ರಂಗಭೂಮಿಯ ಶಕ್ತಿ ಸಾಮರ್ಥ್ಯ ನಮಗೆ ಅರ್ಥವಾಗುತ್ತದೆ. ನೆಲಮೂಲ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ಜನಪದರು ಪುರಾಣ ಪುಣ್ಯ ಕಥೆಗಳನ್ನು ನಾಟಕಗಳ ಮೂಲಕ ದರ್ಶಿಸುತ್ತ, ಭಕ್ತಿ ಭಾವಗಳನ್ನು ಜನಮಾನಸದಲ್ಲಿ ಬಿತ್ತುತಿದ್ದರು. ದೈವೀ ಭಾವ ಮತ್ತು ಸಾಮಾಜಿಕ ಚಿಂತನೆಯ ಹಿನ್ನೆಲೆಯಲ್ಲಿ ರೂಪುಗೊಂಡ ಈ ಪ್ರಕಾರ ಒಂದು ಅನನ್ಯ ಲಲಿತ ಕಲೆಯಾಗಿ ಬೆಳೆದು ನಿಂತಿರುವುದು ಈಗ ಇತಿಹಾಸ. ಒಂದು ಕಾಲಕ್ಕೆ ಎಲ್ಲ ವಯೋಮಾನದ ಪ್ರೇಕ್ಷಕರ ಮೇಲೂ ರಂಗಭೂಮಿ ದಟ್ಟವಾದ ಪ್ರಭಾವ ಬೀರಿತ್ತು ಎನ್ನುವುದನ್ನು ಅಲ್ಲಗಳೆಯಲಾಗದು.

ರಂಗಭೂಮಿಯನ್ನು ಅಧ್ಯಯನದ ದೃಷ್ಟಿಯಿಂದ ಜನಪದ ರಂಗಭೂಮಿ ಮತ್ತು ಶಿಷ್ಟ ರಂಗಭೂಮಿ ಎಂದು ಗುರುತಿಸಲಾಗಿದೆ. ಜನಪದ ರಂಗಭೂಮಿಯಲ್ಲಿ ಪ್ರಧಾನವಾಗಿ ಬಯಲಾಟ, ತೊಗಲುಗೊಂಬೆಯಾಟ, ದಾಸರಾಟ, ಸಣ್ಣಾಟಗಳನ್ನು ಕಾಣುತ್ತೇವೆ. ದಕ್ಷಿಣ ಕನ್ನಡದ ಕಡೆ

ಯಕ್ಷಗಾನವು ಕಾಣಸಿಗುತ್ತದೆ. ಜನಪದ ರಂಗಭೂಮಿಯ ನಾಟಕಗಳ ವಸ್ತು ಪುರಾಣಗ (ಮಿಥ್) ಳದ್ದು. ಬಯಲಿನಲ್ಲಿ ತಾವೇ ರಂಗ ಸಜ್ಜಿಕೆಯನ್ನು ರಚಿಸಿಕೊಂಡು ಅಭಿನಯಿಸುವ ಕಲಾವಿದರು ವೀರಾವೇಷ, ಕುಣಿತ, ಸಂಭಾಷಣೆಗಳ ಮೂಲಕ ನಮ್ಮ ಎದುರಿಗೆ ಅದ್ಭುತವಾದ ಲೋಕವೊಂದನ್ನು ತೆರೆದು ತೋರಿಸುತ್ತಾರೆ.ಇಲ್ಲಿ ಹಾಡುಗಾರಿಕೆ ಇರುತ್ತದೆ. ನಾಟಕದಲ್ಲಿ ಸಾರಥಿ ಆದವನು ಇಡೀ ನಾಟಕವನ್ನು ನಿರ್ವಹಿಸುತ್ತಾನೆ. ಅವನು ಪಾತ್ರಧಾರಿಗಳ ಮತ್ತು ಪ್ರೇಕ್ಷಕರ ನಡುವೆ ಕೊಂಡಿಯಂತೆ ಕೆಲಸ ಮಾಡುತ್ತಾನೆ. ಹಗಲು ವೇಷಗಾರರು ಕೂಡ ರಾಮಾಯಣ ಮಹಾಭಾರತದಂತಹ ಪುರಾಣ ವಸ್ತುಗಳನ್ನು ಒಳಗೊಂಡ ಕೆಲ ಸನ್ನಿವೇಶಗಳನ್ನು ಬಳಸಿಕೊಂಡು ಮನೆ ಮನೆಗಳ ಮುಂದೆ ಸೊಗಸಾಗಿ ಅಭಿನಯಿಸುವುದನ್ನು ಕಾಣಬಹುದು. ಈ ಕಲೆ ಇಂದು ನೇಪತ್ಯಕ್ಕೆ ಸರಿದಿದೆ.

"ಕನ್ನಡ ರಂಗಭೂಮಿ ಎಂದು ನಾವು ಗುರುತಿಸಬಹುದಾದ ವೈಶಿಷ್ಟ ಪೂರ್ಣ ರಂಗಭೂಮಿಯೊಂದು ಇನ್ನೂ ಸೃಷ್ಟಿಯಾಗಿಲ್ಲ. ಪ್ರತ್ಯೇಕ ಪ್ರತಿಭೆಗಳ ಅಭಿವ್ಯಕ್ತಿ ಮಾತ್ರ ನಾಟಕ ಕ್ಷೇತ್ರದಲ್ಲಿ ಕಾಣುತ್ತಿದೆ."* 3 ಎನ್ನುವ ಎಲ್. ಎಸ್. ಶೇಷಗಿರಿರಾವ್ ಅವರ ಮಾತುಗಳು ವಿಚಾರಾರ್ಹವಾಗಿವೆ. ಆಧುನಿಕ ರಂಗಭೂಮಿಯಲ್ಲಿ ಪೌರಾಣಿಕ, ಐತಿಹಾಸಿಕ,ಸಾಮಾಜಿಕ,ಏಕಾಂಕ, ಗೀತ ನಾಟಕ, ಮುಂತಾದ ಪ್ರಯೋಗಗಳನ್ನು ಕಾಣುತ್ತೇವೆ. ಜನಸಾಮಾನ್ಯರು ದಿನನಿತ್ಯ ಅನುಭವಿಸುವ ಯಾತನೆ, ಸಂಕಟ, ತಲ್ಲಣಗಳನ್ನು ಕಲಾತ್ಮಕವಾಗಿ ಅಭಿನಯಿಸಿ ತೋರಿಸುವ ನಾಟಕಗಳು ಜನರಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತುತ್ತವೆ. ನಾಡು ನುಡಿಯ ಪ್ರೇಮವನ್ನು ಬೆಳೆಸುತ್ತವೆ. ಸಾಂಸ್ಕೃತಿಕ ಎಚ್ಚರವನ್ನು ಕೊಡುತ್ತವೆ. ಪ್ರಖರ ರಾಜಕೀಯ ಪ್ರಜ್ಞೆ , ಕೌಟುಂಬಿಕ ಆದರ್ಶದ ತಾತ್ವಿಕತೆ, ನಿಜವಾದ ಬದುಕಿನ ಬಗೆಗೆ ಹೊಸ ಅರಿವನ್ನು ಮೂಡಿಸುತ್ತವೆ.ಆ ಭಾಗವಾಗಿ ರಂಗಭೂಮಿಯನ್ನು ಪರಿಭಾವಿಸಬೇಕಾದ ಅಗತ್ಯವಿದೆ.

ಸಮಾಜ ದಿನನಿತ್ಯ ಸ್ಥಿತ್ಯಂತರಗೊಳ್ಳುವ ಹಾಗೆ ರಂಗಭೂಮಿಯಲ್ಲೂ ಒಂದಿಷ್ಟು ಹೊಸ ಪ್ರಯೋಗಗಳ ಸಾಧ್ಯತೆ ನಡೆಯಿತು. ಆ ಸಾಧ್ಯತೆಯೇ ಬೀದಿ ನಾಟಕ. ಎಪ್ಪತ್ತರ ದಶಕದಲ್ಲಿ ಸಮುದಾಯದ ಮೂಲಕ ಹೊಸ ಬದಲಾವಣೆಗಾಗಿ ಮೂಡಿ ಬಂದ ' ಬೀದಿ ನಾಟಕ ' ದೇಶದಾದ್ಯಂತ ಹೊಸ ಸಂಚಲನವನ್ನೇ ಉಂಟು ಮಾಡಿತು.ಹೊಸ ಹುಡುಕಾಟಕ್ಕೆ ಹಚ್ಚಿತು. ." ಎಲ್ಲಿಂದ ಬಂದಿರೆಂದು ಕೇಳಬಹುದು ನೀವು / ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು./ ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದೋ ನೀವು./ ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು." ಎಂದು ಹಾಡುತ್ತ ಸಾಗಿದ ಕಲಾವಿದರು ಜನರು ಹೆಚ್ಚಾಗಿ ಸೇರುವ ಬೀದಿ, ಸಂತೆ, ಬಸ್ಸು ತಂಗುದಾಣಗಳಲ್ಲಿ ನಾಟಕಗಳನ್ನು ಅಭಿನಯಿಸುತ್ತಾರೆ. ಜನರ ನಡುವಿನಿಂದಲೇ ಎದ್ದು ಬರುವ ಪಾತ್ರಧಾರಿಗಳು ಮುಖಕ್ಕೆ ಯಾವ ಬಣ್ಣವಿಲ್ಲದೆ, ವೇಷ ಭೂಷಣಗಳ ಹಂಗಿಲ್ಲದೆ ಅರ್ಥಪೂರ್ಣವಾಗಿ ಅಭಿನಯಿಸುತ್ತಾರೆ. ಸುಡುವ ವರ್ತಮಾನದಲ್ಲಿ ನಾವು ಎದುರಿಸುವ ವಿಭಿನ್ನ ನೆಲೆಯ ಸಮಸ್ಯೆಗಳನ್ನು ಕಥೆಯ ವಸ್ತುವಾಗಿಸಿಕೊಂಡು ಅಭಿನಯಿಸುತ್ತಾರೆ. ಅನ್ಯಾಯ, ಶೋಷಣೆಗಳಿಗೆ ಪ್ರತಿರೋಧವನ್ನು ಒಡ್ಡುತ್ತಾರೆ. ಸಮಾನತೆ, ಮಾನವೀಯತೆ, ಸೌಹಾರ್ದತೆಗಾಗಿ ಮಿಡಿಯುತ್ತಾರೆ. ಬೀದಿ ನಾಟಕದ ಸಮುದಾಯ ಕಲಾವಿದರು ಪ್ರಧಾನವಾಗಿ ಜನಸಂಖ್ಯೆ, ಸಾಕ್ಷರತೆ, ಪರಿಸರ, ಮೂಢನಂಬಿಕೆ, ವರದಕ್ಷಿಣೆ, ಮತದಾನದ ಮಹತ್ವ, ಸ್ತ್ರೀ ಶೋಷಣೆ, ಜನ ವಿರೋಧಿ ನೀತಿ, ಸ್ವಾತಂತ್ರ್ಯ, ಸಮಾನತೆ ಮುಂತಾದ ವಿಷಯಗಳ ಬಗೆಗೆ ಜನರಲ್ಲಿ ಜಾಗೃತಿಯನ್ನು ಉಂಟು ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಇದು ಸಮುದಾಯ ಬೀದಿ ನಾಟಕದ ಸಾಧ್ಯತೆ. ಬಹಳ ಮುಖ್ಯವಾಗಿ ಎಡಪಂಥೀಯ ವಿಚಾರಗಳನ್ನು ಜನರಿಗೆ ತಲುಪಿಸುವ ಈ ಬೀದಿ ನಾಟಕದ ಹರಿಕಾರರೆಂದರೆ ಸಫ್ದರ್ ಹಸ್ಮಿ. ಇದೇ ಕಾರಣಕ್ಕಾಗಿಯೇ ಅವರ ಕೊಲೆಯಾಗಿರುವುದು ಸಾಮಾಜಿಕ ದುರಂತಗಳಲ್ಲೊಂದು.

ಆಧುನಿಕ ರಂಗಭೂಮಿಯನ್ನು ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಎಂದು ಗುರುತಿಸಲಾಗಿದೆ. ವೃತ್ತಿ ರಂಗಭೂಮಿಯ ಕಲಾವಿದರು ರಂಗಭೂಮಿಯನ್ನೇ ನೆಚ್ಚಿಕೊಂಡವರು. ಜಾಗತೀಕರಣದ ಈ ಹೊತ್ತಿನಲ್ಲಿ ಸಿನಿಮಾ,ದೂರದರ್ಶನ, ಸಾಮಾಜಿಕ ಜಾಲತಾಣಗಳ ಭರಾಟೆಯಲ್ಲಿ ಪ್ರೇಕ್ಷಕರಿಲ್ಲದೆ ವೃತ್ತಿ ರಂಗಭೂಮಿ ನೆಲಕಚ್ಚುವಂತಾಗಿದೆ. ಹೀಗಾಗಿ ಇಂದು ಬಹುಪಾಲು ಕಂಪನಿಗಳು ಮುಚ್ಚಿಹೋಗಿವೆ. ಕೆಲವು ಕಂಪನಿಗಳು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿವೆ. ಕಲಾವಿದರ ಬದುಕು ಅತಂತ್ರದಲ್ಲಿದೆ. ನಾಟಕಗಳು ಹೆಚ್ಚು ಪ್ರಯೋಗಗಳನ್ನು ಕಾಣಬೇಕೆಂದರೆ ಪ್ರೇಕ್ಷಕರೇ ಜೀವಾಳ. ಅವರ ಆಸಕ್ತಿ, ಅಭಿರುಚಿಗಳು ಇಂದು ಬದಲಾಗಿವೆ. ಬದಲಾದ ಕಾಲಘಟ್ಟದಲ್ಲಿ

ನಾಟಕ ಕಂಪನಿಗಳು ಗಟ್ಟಿಯಾಗಿ ನೆಲೆ ನಿಲ್ಲಬೇಕು. ನಾಟಕ ಕಂಪನಿಗಳು ತಮ್ಮ ಮೂಲ ಆಶಯದಿಂದ ವಿಮುಖಗೊಳ್ಳಬಾರದು.ನಾಟಕದಲ್ಲಿನ ದ್ವಂದ್ವಾರ್ಥದ ಸಂಭಾಷಣೆ, ಐಟಂ ಸಾಂಗುಗಳು ನಿಲ್ಲಬೇಕು. ಏಕೆಂದರೆ ಈ ಹೊತ್ತಿನ ವೃತ್ತಿರಂಗಭೂಮಿಯ ನಾಟಕಗಳು ಎಂದರೆ ವಯಸ್ಕರಿಗೆ ಮಾತ್ರ ಎನ್ನುವ ಮನೋಭಾವನೆ ಬೆಳೆದಿದೆ. ಇದನ್ನು ಮುರಿದು ಕಟ್ಟಬೇಕು. ಕಂಪನಿ ಮಾಲೀಕರು ಮತ್ತು ಕಲಾವಿದರು ಹೊಸತನವನ್ನು ರೂಢಿಸಿಕೊಳ್ಳಬೇಕು. ಹೊಸ ಅಲೆಯ, ಹೊಸ ಸಂವೇದನೆಯ ನಾಟಕಗಳನ್ನು ಪ್ರದರ್ಶಿಸಬೇಕು. ಮಹಿಳಾ ಪ್ರೇಕ್ಷಕರು ನಾಟಕದ ಕಡೆ ಮುಖ ಮಾಡುವ ಹಾಗೆ ಆಲೋಚಿಸಬೇಕು. ವೃತ್ತಿ ರಂಗಭೂಮಿಯ ಕಲಾವಿದರು ಕ್ಯಾಂಪ್ ಮಾಡಿದಾಗ ಸರ್ಕಾರ ಪರವಾನಿಗೆಗೆ ಸಂಬಂಧಿಸಿದಂತೆ ಈಗ ಇರುವ ಕೆಲವು ನಿಯಮಗಳನ್ನು ಸಡಿಲಿಸಬೇಕು.

ಹವ್ಯಾಸಿ ರಂಗಭೂಮಿ ಕಲಾವಿದರು ಊರಿನ ಜಾತ್ರೆ,ಹಬ್ಬ, ಉತ್ಸವಗಳಲ್ಲಿ ನಾಟಕಗಳನ್ನು ಅಭಿನಯಿಸುತ್ತಾರೆ.. ಈ ಹೊತ್ತು ಗ್ರಾಮೀಣ ಪ್ರದೇಶಗಳಲ್ಲಿ ನಾಟಕಗಳನ್ನು ಅಭಿನಯಿಸಬೇಕಾದರೆ ಸಾಕಷ್ಟು ಹಣ ವ್ಯಯವಾಗುತ್ತದೆ. ಇಲ್ಲಿಯೂ ಪ್ರೇಕ್ಷಕರ ಕೊರತೆಯಿಂದಾಗಿ ನಾಟಕದ ಖರ್ಚನ್ನು ನಟರೇ ಭರಿಸಲಾಗದೆ ತೊಂದರೆಯನ್ನು ಅನುಭವಿಸಬೇಕಾದ ಅನಿವಾರ್ಯತೆಗಳು ಎದುರಾಗುತ್ತಿವೆ. ನಾಟಕಗಳನ್ನು ಅಭಿನಯಿಸುವ ಹವ್ಯಾಸಿ ಕಲಾವಿದರು ಕಲೆಯನ್ನು ಗಂಭೀರವಾಗಿ ಸ್ವೀಕರಿಸದೆ ಇರುವುದು, ಪ್ರೀತಿ ಮತ್ತು ಶ್ರದ್ಧೆ ಇರದೇ ಇರುವುದು ಕಲಾಭಿಮಾನಿಗಳ ಕೊರತೆಗೆ ಮತ್ತೊಂದು ಕಾರಣ. ಇವುಗಳ ನಡುವೆಯೂ ರಂಗ ಚಟುವಟಿಕೆಗಳು ಭಾರತೀಯ ನೆಲದಲ್ಲಿ ನಿತ್ಯ ನಡೆಯುತ್ತಲೇ ಇವೆ.ಅದು ತೀರಾ ನಿರಾಶದಾಯಕವಾದುದೇನಲ್ಲ. ಅವುಗಳ ಪ್ರಮಾಣ ಕಡಿಮೆಯಾಗಿರಬಹುದು ಅಷ್ಟೇ. ರಂಗಭೂಮಿ ನಿಂತ ನೀರಾಗದೆ ಸದಾ ಹರಿಯುತ್ತಲೇ ಇರುವುದು ಸಮಾಧಾನದ ಸಂಗತಿ.

ಇಡೀ ರಂಗಭೂಮಿ ವರ್ತಮಾನದಲ್ಲಿ ಅನೇಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸರಕಾರ ರಂಗಭೂಮಿಯ ಚಟುವಟಿಕೆಗಳಿಗೆ ಧನ ಸಹಾಯವನ್ನು ಒದಗಿಸಬೇಕು. ಆ ಮೂಲಕ ಸೊರಗುತ್ತಿರುವ ರಂಗಭೂಮಿಗೆ ಊರುಗೋಲಾಗಿ ನೈತಿಕ ಸ್ಥೈರ್ಯವನ್ನು ತುಂಬಬೇಕು. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ರಂಗ ಶಿಕ್ಷಣ ಕೇಂದ್ರಗಳನ್ನು ತೆರೆಯಬೇಕು. ಪದವಿ ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ನಾಟಕಕ್ಕೆ ಸಂಬಂಧಿಸಿದ ವಿಷಯವನ್ನು ಐಚ್ಛಿಕವಾಗಿ ಓದುವಂತಾಗಬೇಕು. ರಂಗಭೂಮಿಯ ಅರಿವನ್ನು ವಿಸ್ತರಿಸುವ ಪಠ್ಯಗಳು ಕೂಡ ಅಗತ್ಯ. ಬಹಳ ಮುಖ್ಯವಾಗಿ ರಂಗಭೂಮಿಗೆ ಸಂಬಂಧಿಸಿದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನಾಟಕದ ಸಂಘ, ಸಂಸ್ಥೆಗಳಿಗೆ ಪ್ರೋತ್ಸಾಹ ಧನವನ್ನು ನೀಡಬೇಕು. ಹಿರಿಯ ರಂಗ ಕಲಾವಿದರಿಗೆ ಮಾಶಾಸನವನ್ನು, ಉಚಿತ ಬಸ್ ಪಾಸುಗಳನ್ನು ವಿತರಿಸುವಂತಾಗಬೇಕು. ಕಲಾವಿದರ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ನಿಲಯದ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು.

ಹೊಸ ತಲೆಮಾರು ಸಮಕಾಲೀನ ರಂಗಭೂಮಿಯ ಬಗೆಗೆ ಪ್ರಜ್ಞಾಪೂರ್ವಕವಾಗಿ ಪ್ರೀತಿ ಮತ್ತು ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ರಂಗಭೂಮಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಲ್ಲದೆ ಪ್ರೋತ್ಸಾಹಿಸಬೇಕು. ನಮ್ಮ ಸಮಾಜ ಕಲಾವಿದರನ್ನು ಅದರಲ್ಲೂ ಕಲಾವಿದೆಯರನ್ನು ಕೀಳರಿಮೆಯಿಂದ ನೋಡುವ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು. ಅವರ ಕಲಾ ಪ್ರತಿಭೆ ಮತ್ತು ವ್ಯಕ್ತಿತ್ವವನ್ನು ಗೌರವದಿಂದ ಕಾಣಬೇಕು. ರಂಗಭೂಮಿಗೆ ಸಂಬಂಧಿಸಿದಂತೆ ಎಲ್ಲೆಡೆ ಹೆಚ್ಚು ವಿಚಾರ ಸಂಕಿರಣ, ಸಂವಾದಗಳನ್ನು ಆಯೋಜಿಸಬೇಕು. ಈ ತೆರನಾದ ನಡೆ ಈ ಹೊತ್ತಿನ ರಂಗಭೂಮಿಯ ಉಳಿವಿಗೆ ಅಗತ್ಯ. ಒಟ್ಟಾರೆ ಪ್ರೇಕ್ಷಕರ ರಂಗಭೂಮಿ ಬಗೆಗಿನ ಪ್ರೀತಿಯ ಒರತೆ ಬತ್ತದಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಸಾಂಸ್ಕೃತಿಕ ಹೊಣೆಗಾರಿಕೆಯಾಗಿದೆ.

**ಅಡಿ ಟಿಪ್ಪಣಿ : ಪರಾಮರ್ಶನ ಗ್ರಂಥಗಳು**


1. ಆಧುನಿಕ ಕನ್ನಡ ನಾಟಕ: ಲೇಖಕರು: ಡಾ.ಕೆ.ಮರುಳಸಿದ್ದಪ್ಪ. ಪುಟ :4.ಪ್ರ ವರ್ಷ 2013. ಪ್ರ : ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
2. ಪ್ರಯೋಗ ಪ್ರಸಂಗ: ಲೇಖಕರು : ಗಣೇಶ ಅಮೀನಗಡ. ಪುಟ: 14.ಪ್ರ ವರ್ಷ:2004. ಪ್ರ : ಅರಿವು ಪ್ರಕಾಶನ,ರಾಜಾಜಿನಗರ, ಬೆಂಗಳೂರು.
3. ಹೊಸಗನ್ನಡ ಸಾಹಿತ್ಯ: ಲೇಖಕರು :ಎಲ್.ಎಸ್. ಶೇಷಗಿರಿರಾವ್. ಪುಟ: 220.ಪ್ರ ವರ್ಷ 1993.ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.